ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
KARNATAK UNIVERSITY DHARWAD
ಪರೀಕ್ಷಾ ವಿಭಾಗ
ಗೌಪ್ಯ ಶಾಖೆ, 2ನೇ ಮಹಡಿ, ಪರೀಕ್ಷಾ ಭವನ
EXAMINATION SECTION
Confidential Branch, 2nd Floor, Examination Bhavan

Azadi Ka Amrit Mahotsav

Website: www.kud.ac.in
e-mail: confidential@kud.ac.in
☎: (0836) 2215259

ನಂ.ಕವಿವಿ/ಪರೀಕ್ಷಾ–ಗೌಪ್ಯ/2024/62

ದಿನಾಂಕ : 21/06/2024

## : ಸುತ್ತೋಲೆ :

ವಿಷಯ: 2023–24ನೇ ಸಾಲಿನ ಸ್ನಾತಕ (NEP) 2, 4 ಮತ್ತು 6ನೇ ಸೆಮೆಸ್ಟರ್ ಪದವಿ ಪ್ರಾಯೋಗಿಕ Internship/Project Work/Field Work ಪರೀಕ್ಷೆಗಳನ್ನು ಜರುಗಿಸುವ ಕುರಿತು.

** **

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಈ ಮೂಲಕ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳ ಗಮನಕ್ಕೆ ತರಬಯಸುವುದೇನೆಂದರೆ, ರಾಷ್ಟ್ರೀಯ ಶಿಕ್ಷಣ ನೀತಿ–2020 ರ ಅಡಿಯಲ್ಲಿ ಜಾರಿಯಲ್ಲಿರುವ ಎಲ್ಲ ಸ್ನಾತಕ ಪದವಿ ತರಗತಿಗಳ (NEP) 2, 4 ಮತ್ತು 6 ನೇ ಸೆಮೆಸ್ಟರ್ ರೆಗ್ಯೂಲರ್/ರಿಪಿಟರ್ಸ್ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಗಳ ವೇಳಾಪಟ್ಟಿಯನ್ವಯ ದಿನಾಂಕ: **06.07.2024** ರಿಂದ **15.07.2024** ರವರೆಗೆ ಪ್ರಾಯೋಗಿಕ ಪರೀಕ್ಷೆ ಹಾಗೂ Internship/Project Work/Field Work ಪರೀಕ್ಷೆಗಳನ್ನು ಜರುಗಿಸಲು ತಿಳಿಸಲಾಗಿದೆ. ಪ್ರಾಯೋಗಿಕ ಪರೀಕ್ಷೆಯ ಪ್ರಾರಂಭಕ್ಕಿಂತ ಮುಂಚಿತವಾಗಿ ಈ ಕೆಳಗಿನ ಹಂತಗಳನ್ನು ಕಡ್ಡಾಯವಾಗಿ ಪೂರೈಸುವುದು.

### ಭಾಗ–1 ಪ್ರಾಯೋಗಿಕ ಪರೀಕ್ಷೆಗಳಿಗೆ ಮಾರ್ಗಸೂಚಿಗಳು ಮತ್ತು ವೇಳಾಪಟ್ಟಿ :

1. ದಿನಾಂಕ: **27.06.2024** ರೊಳಗಾಗಿ ಪರೀಕ್ಷಾ ಅರ್ಜಿಯನ್ನು ತುಂಬಿದ ವಿದ್ಯಾರ್ಥಿಗಳ ಮಾಹಿತಿಯನ್ನು Principal login ನಲ್ಲಿ ಪ್ರಾಚಾರ್ಯರರು **UUCMS** ತಂತ್ರಾಂಶದಲ್ಲಿ ತಪ್ಪದೇ ಅನುಮೋದಿಸುವುದು.
2. ದಿನಾಂಕ:**28.06.2024** ರೊಳಗಾಗಿ ಹಾಜರಾತಿಯನ್ನು **UUCMS** ತಂತ್ರಾಂಶದಲ್ಲಿ ನೊಂದಾಯಿಸುವುದು ಹಾಗೂ ಅನುಮೋದಿಸುವುದು
3. Principal login ನಲ್ಲಿ Check Eligibility ಆದ ನಂತರ Admin login ನಲ್ಲಿ ದಿನಾಂಕ: **29.06.2024** ರಿಂದ **01.07.2024** ರೊಳಗಾಗಿ ಮಹಾವಿದ್ಯಾಲಯದವರು **12** ರಿಂದ ಗರಿಷ್ಠ **20** ವಿದ್ಯಾರ್ಥಿಗಳಂತೆ ಬ್ಯಾಚ್‌ಗಳನ್ನು ರಚಿಸುವುದು. ವಿ.ಸೂ: ಬ್ಯಾಚ್‌ಗಳನ್ನು Outside UUCMS ನಲ್ಲಿ ಮಾಡತಕ್ಕದ್ದಲ್ಲ.
4. ದಿನಾಂಕ: **02.07.2024** ರಿಂದ **04.07.2024** ರೊಳಗಾಗಿ ಸಂಬಂಧಪಟ್ಟ ವಿಷಯದ ಬಿ.ಓ.ಎ.ಇ. ಅಧ್ಯಕ್ಷರುಗಳು UUCMS ನಲ್ಲಿ ಬ್ಯಾಚ್‌ಗಳನ್ನು ಅನುಮೋದಿಸುವುದು. ಹಾಗೂ ಸಂಬಂಧಪಟ್ಟ ವಿಷಯದ ಬಿ.ಓ.ಎ.ಇ. ಅಧ್ಯಕ್ಷರುಗಳು UUCMS ನಲ್ಲಿ ಕಡ್ಡಾಯವಾಗಿ ಬಾಹ್ಯ ಪರೀಕ್ಷಕರನ್ನು ನೇಮಿಸುವುದು.
5. ದಿನಾಂಕ: **06.07.2024** ರಿಂದ **15.07.2024** ರ ಅವಧಿಯಲ್ಲಿ ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸಿ ಆಯಾ ದಿನದ ಬ್ಯಾಚುಗಳ ಪ್ರಾಯೋಗಿಕ ಅಂಕಗಳನ್ನು ಅದೇ ದಿನದಂದು UUCMS ನಲ್ಲಿ ಕಡ್ಡಾಯವಾಗಿ ನಮೂದಿಸುವುದು. ವಿ.ಸೂ: ಪರೀಕ್ಷೆ ಜರುಗಿದ ಮರುದಿನ ಅಂಕಗಳನ್ನು ನಮೂದಿಸಲು ಸಾಧ್ಯವಾಗುವುದಿಲ್ಲ.
6. ಸಂಬಂಧಪಟ್ಟ ವಿಷಯದ ಪ್ರಾಯೋಗಿಕ ಪರೀಕ್ಷೆಗಳು ಮುಕ್ತಾಯಗೊಂಡ ನಂತರ ಅಂಕಗಳ ಯಾದಿಯನ್ನು ದ್ವಿ ಪ್ರತಿಯಲ್ಲಿ ಸಿದ್ದಪಡಿಸಿ ಒಂದು ಪ್ರತಿಯನ್ನು ಗಣಕಯಂತ್ರ ವಿಭಾಗದ ಮುಖ್ಯಸ್ಥರಿಗೆ ಹಾಗೂ ಇನ್ನೊಂದು ಪ್ರತಿಯನ್ನು ಸಂಬಂಧಿಸಿದ ಪರೀಕ್ಷಾ ವಿಭಾಗದ ಅಧೀಕ್ಷಕರಿಗೆ ಮೂರು ದಿನಗಳೊಳಗಾಗಿ ಕಳುಹಿಸಲು ಸೂಚಿಸಲಾಗಿದೆ.

**ವಿ.ಸೂ: ಆಂತರಿಕ ಪರೀಕ್ಷಕರ ಕಾರ್ಯವನ್ನು ಸಂಬಂಧಪಟ್ಟ ಮಹಾವಿದ್ಯಾಲಯದ ಶಿಕ್ಷಕರು ನಿರ್ವಹಿಸುವುದು. ಯಾವುದೇ ಕಾರಣಕ್ಕೂ ಬಾಹ್ಯ ಪರೀಕ್ಷಕರಿಲ್ಲದೇ ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸತಕ್ಕದ್ದಲ್ಲ. ಒಂದು ವೇಳೆ ಆಂತರಿಕ ಪರೀಕ್ಷಕರು ಲಭ್ಯವಿಲ್ಲದಿದ್ದಲ್ಲಿ ಇಬ್ಬರು ಬಾಹ್ಯ ಪರೀಕ್ಷಕರನ್ನು ನೇಮಿಸಿಕೊಂಡು ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸುವುದು. ಇಂತಹ ಸಂದರ್ಭದಲ್ಲಿ ಹೆಚ್ಚುವರಿ ಬಾಹ್ಯ ಪರೀಕ್ಷಕರನ್ನು ಸಂಬಂಧಪಟ್ಟ ಬಿ.ಓ.ಎ.ಇ ಅಧ್ಯಕ್ಷರುಗಳಿಂದ ನೇಮಿಸಿಕೊಳ್ಳುವುದು.**

**ಭಾಗ-2: Internship /Project Work / Field Work ಪರೀಕ್ಷೆಗಳನ್ನು ಜರುಗಿಸಲು ಮಾರ್ಗಸೂಚಿಗಳು/ವೇಳಾಪಟ್ಟಿ:**

ಎಲ್ಲ ಸ್ನಾತಕ ಪದವಿಗಳ 6ನೇ ಸೆಮಿಸ್ಟರ್‌ಗಳಲ್ಲಿ ಅವಶ್ಯವುಳ್ಳ Internship / Project Work / Field Work ಪರೀಕ್ಷೆಗಳು Formative Assessment ರೂಪದಲ್ಲಿ ಜರುಗಿಸಲು ನಿರ್ಧರಿಸಿ ಈಗಾಗಲೇ ಸುತ್ತೋಲೆಯ ಮೂಲಕ ಎಲ್ಲ ಮಹಾವಿದ್ಯಾಲಯಗಳಿಗೆ ತಿಳಿಸಲಾಗಿದ್ದು ಈ ಕೆಳಗಿನ ವೇಳಾಪಟ್ಟಿಯನ್ನು ಅನುಸರಿಸಿ ಪರೀಕ್ಷೆ ಜರುಗಿಸುವುದು.

**ವೇಳಾಪಟ್ಟಿ :**

1. ಪ್ರಾಯೋಗಿಕ ವಿಷಯಗಳನ್ನು ಹೊರತುಪಡಿಸಿ BA/B.Com/BBA ಇತರೆ ಪದವಿಯ ವಿಷಯಗಳ ಪ್ರೊಜೆಕ್ಟ ವರ್ಕ ಪರೀಕ್ಷೆಗಳನ್ನು ದಿನಾಂಕ:06/07/2024 ರಿಂದ 15/07/2024 ರ ವರೆಗೆ ನಡೆಸುವುದು.
2. ಪ್ರಾಯೋಗಿಕ B.Sc/BCA ಇತರೆ ಪದವಿ ವಿಷಯಗಳ ಪ್ರೊಜೆಕ್ಟ ವರ್ಕ ಪರೀಕ್ಷೆಗಳನ್ನು ನಿಗದಿತ ಪ್ರಾಯೋಗಿಕ ಪರೀಕ್ಷೆ ಮುಗಿದ ಕೂಡಲೇ ಅಂದರೆ ದಿನಾಂಕ:15/07/2024 ರೊಳಗೆ ಜರುಗಿಸುವುದು.

**ಮಾರ್ಗಸೂಚಿಗಳು :**

1. ಪ್ರತಿ ಬ್ಯಾಚಿಗೆ 20 ವಿದ್ಯಾರ್ಥಿಗಳೊಂದಿಗೆ ದಿನಕ್ಕೆ 02 ಬ್ಯಾಚಿನಂತೆ ಪರೀಕ್ಷೆ ಜರುಗಿಸುವದು.
2. ಪ್ರತಿ ಬ್ಯಾಚಿನ ವಿದ್ಯಾರ್ಥಿಗಳ ಪ್ರಾಯೋಗಿಕ ಉತ್ತರ ಪತ್ರಿಕೆಯನ್ನು ಒಬ್ಬ ಆಂತರಿಕ ಹಾಗೂ ಒಬ್ಬ ಬಾಹ್ಯ ಪರೀಕ್ಷಕರು ಸೇರಿ ಮೌಲ್ಯಮಾಪನ ಮಾಡುವುದು.
3. ಬಾಹ್ಯ ಪರೀಕ್ಷಕರನ್ನು ಹತ್ತಿರದ ಕಾಲೇಜನಿಂದ ಸಂಬಂಧಪಟ್ಟ ಪ್ರಾಚಾರ್ಯರು ನೇಮಿಸಿಕೊಳ್ಳುವುದು ಹಾಗೂ ಮಾಹಿತಿಯನ್ನು ಕ.ವಿ.ವಿ.ಗೆ ಕಳುಹಿಸುವುದು.
4. ಅವಶ್ಯವಿದ್ದಲ್ಲಿ 1 ಕ್ಕಿಂತ ಹೆಚ್ಚು ಆಂತರಿಕ ಹಾಗೂ ಬಾಹ್ಯ ಪರೀಕ್ಷಕರನ್ನು ನೇಮಿಸಿಕೊಂಡು ನಿಗದಿತ ಸಮಯದಲ್ಲಿ ಹೆಚ್ಚು ಬ್ಯಾಚಿನೊಂದಿಗೆ ಪರೀಕ್ಷೆಯನ್ನು ಜರುಗಿಸಿ ಪೂರ್ಣಗೊಳಿಸುವುದು.
5. ಹೆಚ್ಚಿನ ಮಾಹಿತಿಗಾಗಿ ಈಗಾಗಲೇ ದಿನಾಂಕ:13/06/2024 ರಂದು ಪ್ರಕಟಿಸಿದ ಮಾರ್ಗಸೂಚಿಗಳನ್ನು ಅನುಸರಿಸುವುದು.
6. ಬಾಹ್ಯ ಹಾಗೂ ಆಂತರಿಕ ಪರೀಕ್ಷಕರು ಮೌಲ್ಯಮಾಪನ ಮಾಡಿದ ನಂತರ ಅಂಕಗಳ ಯಾದಿಯನ್ನು ಸಹಿಯೊಂದಿಗೆ ಪ್ರಾಚಾರ್ಯರಿಗೆ ಸಲ್ಲಿಸುವುದು.
7. ಸದರ ಅಂಕಗಳ ಯಾದಿಯನ್ನು ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯ ಸೂಚಿಸಿದ ದಿನದಂದು ಯು.ಯು.ಸಿ.ಎಂ.ಎಸ್ ತಂತ್ರಾಂಶದಲ್ಲಿ I.A ಎಂದು ಪರಿಗಣಿಸಿ ಅಂಕಗಳನ್ನು HOD Login ನಲ್ಲಿ ನಮೂದಿಸುವುದು.
8. ಅಂಕಗಳನ್ನು ನಮೂದಿಸಿದ ನಂತರ ಒಂದು ಪ್ರತಿಯನ್ನು ಗಣಕ ಯಂತ್ರ ಪರೀಕ್ಷಾ ವಿಭಾಗಕ್ಕೆ ಹಾಗೂ ಮತ್ತೊಂದು ಪ್ರತಿಯನ್ನು ಪರೀಕ್ಷಾ ವಿಭಾಗದ ಸಂಬಂಧಪಟ್ಟ ವಿಭಾಗಕ್ಕೆ ತಪ್ಪದೆ ಸಲ್ಲಿಸುವುದು.
9. ಸಂಬಂಧಪಟ್ಟ ವಿಷಯದ Internship/Project Work/Field Work ಪರೀಕ್ಷೆಗಳು ಮುಕ್ತಾಯಗೊಂಡ ನಂತರ ಅಂಕಗಳ ಯಾದಿಯನ್ನು ದ್ವಿ ಪ್ರತಿಯಲ್ಲಿ ಸಿದ್ದಪಡಿಸಿ ಒಂದು ಪ್ರತಿಯನ್ನು ಗಣಕಯಂತ್ರ ವಿಭಾಗದ ಮುಖ್ಯಸ್ಥರಿಗೆ ಹಾಗೂ ಇನ್ನೊಂದು ಪ್ರತಿಯನ್ನು ಸಂಬಂಧಿಸಿದ ಪರೀಕ್ಷಾ ವಿಭಾಗದ ಅಧೀಕ್ಷಕರಿಗೆ ಮೂರು ದಿನಗಳೊಳಗಾಗಿ ಕಳುಹಿಸಲು ಸೂಚಿಸಲಾಗಿದೆ.

ಮೇಲ್ಕಾಣಿಸಿದ ಎಲ್ಲ ಅಂಶಗಳನ್ನು ಸಂಬಂಧಿಸಿದ ಎಲ್ಲ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ತಂದು ಅದರಂತೆ ಪ್ರಾಯೋಗಿಕ / Internship/ Project Work / Field Work ಪರೀಕ್ಷೆಗಳನ್ನು ಜರುಗಿಸುವುದು. ತಪ್ಪಿದಲ್ಲಿ ಸಂಬಂಧಿಸಿದ ಪ್ರಾಚಾರ್ಯರೇ ಹೊಣೆಗಾರರು.

ಕುಲಸಚಿವರು(ಮೌಲ್ಯಮಾಪನ)

ಗೆ,

ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು.

ಪ್ರತಿ ಮಾಹಿತಿಗಾಗಿ :

1. ಸಿಸ್ಟಮ್ ಅನಾಲಿಸ್ಟ್, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
2. ಉಪ ಕುಲಸಚಿವರು ಸಹಾಯಕ ಕುಲಸಚಿವರು, ವಿದ್ಯಾಮಂಡಳ/ಪರೀಕ್ಷಾ ವಿಭಾಗ, ಕ.ವಿ.ವಿ., ಧಾರವಾಡ.
3. ನಿರ್ದೇಶಕರು, ಐ.ಟಿ. ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ. ಸದರ ಸುತ್ತೋಲೆಯನ್ನು ಕವಿವಿ ಅಂತರ್ಜಾಲದಲ್ಲಿ ಪ್ರಕಟಿಸುವುದು.
4. ಕುಲಪತಿಗಳ, ಕುಲಸಚಿವರು, ಕುಲಸಚಿವರು(ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
5. ಅಧೀಕ್ಷಕರು, ಪ್ರಶ್ನೆ ಪತ್ರಿಕೆ / ಗೌಪ್ಯ / ಜಿ.ಎ.ಡಿ. / ವಿದ್ಯಾಂಡಳ (ಪಿ.ಜಿ.ಪಿಎಚ್.ಡಿ) ವಿಭಾಗ, ಸಂಬಂಧಿಸಿದ ಕೋರ್ಸುಗಳ ವಿಭಾಗಗಳು ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.